ಪ್ರಶ್ನೆ ಸಂಖ್ಯೆ: 48(21)

ಅಧ್ಯಕ್ಷರು: ಬಸವರಾಜುರವರೆ, ತಮ್ಮ ಪ್ರಶ್ನೆಗೆ ಉತ್ತರಿಸಬೇಕಾಗಿದ್ದ ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು ತುರ್ತು ಕೆಲಸವಿದ್ದ ನಿಮಿತ್ತ ನನ್ನ ಅನುಮತಿ ಪಡೆದುಕೊಂಡು ಹೋಗಿರುವುದರಿಂದ, ಈ ಕುರಿತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರ ಬಳಿಯೂ ಉತ್ತರ ಲಭ್ಯವಿಲ್ಲದಿರುವುದರಿಂದ ತಮಗೆ ಸಂಜೆಯೊಳಗಾಗಿ ಉತ್ತರ ಒದಗಿಸಿಕೊಡುವ ವ್ಯವಸ್ಥೆ ಮಾಡುತ್ತೇನೆ. ತಾವು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು) ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಸಂಜೆಯೊಳಗೆ ಉತ್ತರ ಒದಗಿಸಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕು.

ಶ್ರೀ ಎಂ. ದಿವಾಕರ್‌ಬಾಬು: ಸಂಜೆಯೊಳಗಾಗಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ತಮ್ಮ ಅನುಮತಿ ಪಡೆದುಕೊಂಡು ತೆರಳಿರುವುದು ಅಪರಾಧವೆಂದು ನಾನು ಹೇಳಲಿಲ್ಲ. ಆದರೆ, ಅವರಿಗೆ ಸಹಾಯಕರಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರಿರುವುದರಿಂದ ಅವರಿಗೆ ವಿಷಯ ತಿಳಿಸಿ ಹೋಗಬಹುದಿತ್ತಲ್ಲ.

ಅಧ್ಯಕ್ಷರು: ಈಗ ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

ವಿಷಯ: (i) ಮೇಲ್ಮನೆಯಲ್ಲಿ ವಿಧಾನ ಪರಿಷತ್ತಿನ ಸದಸ್ಯರೊಬ್ಬರು ವಿಧಾನಸಭೆಯ ಸದಸ್ಯರಾಗಿರುವ ಶ್ರೀ ಬಿ. ಸೋಮಶೇಖರ್ ಅವರ ಹೆಸರನ್ನು ಸದನದಲ್ಲಿ ಪ್ರಸ್ತಾಪಿಸಿ ಅಗೌರವವುಂಟು ಮಾಡಿರುವುದು.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಅಧ್ಯಕ್ಷರೆ, ಈ ಸದನದ ಸದಸ್ಯರಾಗಿರುವ ಬಿ.ಸೋಮಶೇಖರ್‌ರವರು ಗೌರವಾನ್ವಿತ ಸದಸ್ಯರಾಗಿರುವರಲ್ಲದೆ ಮಾಜಿ ಸಚಿವರೂ ಆಗಿದ್ದು, ಇವರ ಮೇಲೆ ಯಾವುದೇ ಆಪಾದನೆಗಳಿಲ್ಲದಿದ್ದರೂ ಮೇಲ್ಮನೆಯಲ್ಲಿ ಯಾರೋ ಒಬ್ಬ ಸದಸ್ಯರು ಇವರ ಕುರಿತು ಇಲ್ಲಸಲ್ಲದ ಮಾತುಗಳನ್ನಾಡಿದ್ದಾರೆ. ಹೈಕೋರ್ಟ್, ಸುಪ್ರೀಂ ಕೋರ್ಟ್ ಮತ್ತು ಲೋಕಾಯುಕ್ತದಿಂದ ಸ್ಪಷ್ಟವಾಗಿ ತೀರ್ಪುಗಳು ಬಂದಿರುವ ಸನ್ನಿವೇಶದ ಹಿನ್ನೆಲೆಯಲ್ಲಿ ನೇಕೆಂತಲೇ ಈ ಆಪಾದನೆ ಮಾಡಿದ್ದು ಮತ್ತು 'ಆ ಕುರಿತು ನಾನು ಒಂದು ವಿಚಾರಣೆ ಮಾಡುತ್ತೇನೆ' ಎಂದು ಸಚಿವರು ತಿಳಿಸಿರುವುದರಿಂದ ಮಾನ್ಯ ಸದಸ್ಯರ ಗೌರವಕ್ಕೆ ಚ್ಯುತಿಯುಂಟಾಗಿರುವ ಪ್ರಸಂಗ ಜರುಗಿದೆ. ಆದುದರಿಂದ, ನಾನು ತಮ್ಮಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ, ಈ ಸದನದ ಸದಸ್ಯರ ಮೇಲೆ ಆಪಾದನೆಗಳಿರಬಹುದು, ಇಲ್ಲವೆಂದು ಹೇಳುವುದಿಲ್ಲ, ನನ್ನ ಮೇಲೂ ಆಪಾದನೆಗಳಿರಬಹುದು. ಒಬ್ಬ ವ್ಯಕ್ತಿಯ ಮೇಲೆ ಆಪಾದನೆಗಳು ಬಂದಾಗ ಆದು ಎಂಥದ್ದೇ ಆಪಾದನೆಗಳಿದ್ದರೂ ಆತನಿಗೆ ಶಿಕ್ಷೆ ವಿಧಿಸುವುದಕ್ಕಿಂತ ಮುಂಚಿತವಾಗಿ ಕಾರಣ ನೀಡಿ 'ನೀನು ಹೇಳುವುದು ಏನಾದರೂ ಇದೆಯೇ?' ಎಂದು ಆತನನ್ನು ಕೇಳುತ್ತಾರೆ. ಮತ್ತು ಗಲ್ಲಿಗೇರಿಸುವುದಕ್ಕಿಂತ ಮುಂಚೆ 'ನಿನ್ನ ಕೊನೆ ಆಸೆ ಏನಾದರೂ ಇದೆಯೇ?' ಎಂತಲೂ ಕೇಳುತ್ತಾರೆ. ಇದ್ಯಾವುದೂ

ಇಲ್ಲದೆ ಅಮಾಯಕ ಸದಸ್ಯರೊಬ್ಬರ ಕುರಿತು 'ನಾನು ವಿಚಾರಣೆ ಮಾಡುತ್ತೇನೆ' ಎಂದು ಸಚಿವರು ಉತ್ತರ ಕೊಟ್ಟಿರುವುದು ಈ ಸರ್ಕಾರಕ್ಕೆ ಗೌರವ ತರುವ ವಿಚಾರವೇ? ಇದು ಒಂದು ಭಾಗ. ಮತ್ತೊಂದು, ಈಗಾಗಲೇ ಜರುಗಿರುವ ಈ ಪ್ರಸಂಗದಿಂದಾಗಿ ಮಾನ್ಯ ಸದಸ್ಯರ ಗೌರವವನ್ನು ಮತ್ತೆ ನೀವು ಕೊಡುವುದಕ್ಕಾಗುತ್ತದೆಯೇ? ಎಂಬುದು. ಮಾನ್ಯ ಅಧ್ಯಕ್ಷರಾದ ತಾವು ನಮ್ಮ ರಕ್ಷಣೆಗೆ ಬರಬೇಕಾಗುತ್ತದೆ. ಈ ಹಿಂದೆ 1972ನೇ ಇಸವಿಯಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಇದೇ ತರಹದ ಪ್ರಶ್ನೆ ಉದ್ಭವವಾಗಿತ್ತು. ಆ ಸಂದರ್ಭದಲ್ಲಿ ಲೋಕಸಭೆಯ ಅಧ್ಯಕ್ಷರು ರಾಜ್ಯಸಭೆಯ ಅಧ್ಯಕ್ಷರಿಗೆ ಒಂದು ಪತ್ರ ಬರೆದು ಅದರಲ್ಲಿ 'ಯಾವುದೇ ಲೋಕಸಭಾ ಸದಸ್ಯರುಗಳ ಮೇಲೆ ಏನಾದರೊಂದು ಆಪಾದನೆ ಬಂದಂಥ ಸಂದರ್ಭದಲ್ಲಿ ಆ ಕುರಿತು ರಾಜ್ಯಸಭೆಯಲ್ಲಿ ಚರ್ಚಿಸುವುದಕ್ಕೆ ತಾವು ಅವಕಾಶ ಮಾಡಿಕೊಡಬಾರದು, ಲೋಕಸಭೆಯಲ್ಲಿಯೇ ಇದರ ಬಗ್ಗೆ ಚರ್ಚೆಯಾಗಬೇಕು' ಎಂದು ತಿಳಿಸಿದ್ದಾರೆ. ಹೀಗಿರುವಾಗ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ಕುರಿತು ತಾವು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಗೆ ಒಂದು ಪತ್ರ ಬರೆಯಬೇಕು. ಅಲ್ಲದೆ, ನಿನ್ನೆ ಮಾನ್ಯ ಸಚಿವರು ಇದೇ ಸದನದಲ್ಲಿ ಮಾತನಾಡುತ್ತಾ 'ಸೋಮಶೇಖರ್‌ರವರು ನನಗೆ ಬಹಳ ಬೇಕಾಗಿರುವವರಾಗಿದ್ದು, ನನ್ನ ಆಪ್ತರಾಗಿದ್ದು, ಅವರ ಬಗ್ಗೆ ನನ್ನಲ್ಲಿ ಯಾವುದೇ ಪೂರ್ವಾಗ್ರಹವಿಲ್ಲ'ವೆಂದು ಹೇಳಿಕೆ ಕೊಟ್ಟಿದ್ದಾರೆ. ಈಗ ಅವರು ಉತ್ತರ ಕೊಡಲು ಸದನಕ್ಕೆ ಬಂದಿದ್ದಾರೆ. ಇದೊಂದು ಭಾಗ. ನಾನು ಅಧ್ಯಕ್ಷರಾಗಿರುವ ತಮಗೆ ಮನವರಿಕೆ ಮಾಡಿಕೊಡುವುದೇನೆಂದರೆ, ತಾವು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಒಂದು ಪತ್ರವನ್ನು ಈ ಹಿನ್ನೆಲೆಯಲ್ಲಿ ಬರೆಯಬೇಕಾಗುತ್ತದೆ. ಇವೊತ್ತು ಈ ಸದನದ ಸದಸ್ಯರಾಗಿರುವ ಸೋಮಶೇಖರ್‌ರವರ ಮೇಲೆ ಆಪಾದನೆ ಮಾಡಿದ್ದಾರೆ, ನಾಳೆ ಸಚಿವ ಸಂಪುಟದಲ್ಲಿರುವ ಮತ್ತೊಬ್ಬ ಸಚಿವರ ಮೇಲೂ ಮಾಡಬಹುದು. ಮಂತ್ರಿಗಳಾದವರು ವಿಧಾನಸಭೆ ಮತ್ತು ವಿಧಾನ ಪರಿಷತ್ ಈ ಎರಡೂ ಸದನಗಳಲ್ಲಿ ಇರಬೇಕಾಗಿರುವುದರಿಂದ ಇವರ ಮೇಲೂ ಆಪಾದನೆ ಮಾಡುವುದಕ್ಕೆ ಅವಕಾಶವಿರುತ್ತದೆ. ನಾಗರೀಕ ವಿಮಾನ ಯಾನ ರಾಜ್ಯ ಸಚಿವರಾಗಿದ್ದ ಟಿ. ಜಾನ್‌ರವರ ಮೇಲೆ ನಾವು ಈಗ ಚರ್ಚಿಸುವುದಕ್ಕಾಗುತ್ತದೆಯೇ? ಅವರು ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಆ ಕುರಿತು ಚರ್ಚಿಸಬಹುದು. ಆದುದರಿಂದ, ತಾವು ವಿಧಾನ ಪರಿಷತ್ತಿನ ಸಭಾಪತಿಯವರಿಗೆ ಪತ್ರ ಬರೆಯಬೇಕಾಗಿರುವುದು ಒಂದು ಸಂಪ್ರದಾಯವಾಗಿದೆ. ಒಬ್ಬ ಮಾನ್ಯ ಸದಸ್ಯರ ಕುರಿತು ಈ ರೀತಿ ಆಪಾದನೆ ಮಾಡುವುದು ಸರಿಯಲ್ಲ. ವಿಧಾನಮಂಡಲದ ಇತಿಹಾಸದಲ್ಲಿ ಯಾವತ್ತೂ ಈ ರೀತಿ ನಡೆದಿರಲಿಲ್ಲ. ಇಂತಹ ಘಟನಾವಳಿ ಪುನರಾವರ್ತನೆಯಾಗಬಾರದು. ಇದಕ್ಕೆ ತಾವು ಕ್ರಮ ಕೈಗೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಾ ತಮ್ಮಿಂದ ಈ ಕುರಿತು ಉತ್ತರ ನಿರೀಕ್ಷಿಸುತ್ತೇನೆ.

+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಮೇಲ್ಮನೆಯಲ್ಲಾಗಲಿ, ಕೆಳಮನೆಯಲ್ಲಾಗಲಿ ಮಾನ್ಯ ಸದಸ್ಯರುಗಳಿಗೆ ಪ್ರಶ್ನೆ ಕೇಳುವ ಹಕ್ಕು ಇದ್ದೇ ಇದೆ; ಅದಕ್ಕೊಸ್ಕರ, ಸದಸ್ಯರು ಮೇಲ್ಮನೆಯಲ್ಲಿ ಕೇಳಿದ್ದಾರೆ. ಆದರೆ, ಒಂದು ಸಹಕಾರ ಸಂಘದ ಅಧ್ಯಕ್ಷರ ಮೇಲೆ ಏನಾದರೂ ಆಪಾದನೆಗಳಿದ್ದರೆ, ಅವರಿಂದ ಅವ್ಯವಹಾರವಾಗಿದ್ದರೆ ಸಂಘದ ಅಧ್ಯಕ್ಷರಿಂದ ಇಂತಿಂಥ ವಿಚಾರಗಳಲ್ಲಿ ಅವ್ಯವಹಾರಗಳಾಗಿವೆಯೆಂದು ದಾಖಲಾತಿಗಳನ್ನು ಸಿದ್ಧಪಡಿಸಿ ಲಿಖಿತ ಮೂಲಕ ಆ ಸಂಘದ ಸದಸ್ಯರು ಕೊಡುವ ಆಪಾದನೆ ಮಾಡಬಹುದಿತ್ತು. ಈ ರೀತಿ ಮಾತನಾಡುವುದಕ್ಕೆ

ಅವರಿಗೆ ಹಕ್ಕು ಇದೆ. ಆದರೆ, ಅವರು ಈ ರೀತಿ ಮಾಡುವುದನ್ನು ಬಿಟ್ಟು 'ಮಾಜಿ ಕಂದಾಯ ಮಂತ್ರಿಗಳಾದ ಸೋಮಶೇಖರ್' ಎಂದು ತಮ್ಮ ಭಾಷಣದುದ್ದಕ್ಕೂ ನನ್ನ ಹೆಸರನ್ನು ಪ್ರಸ್ತಾಪಿಸಿದ್ದಾರೆ. ವೈಯಕ್ತಿಕವಾಗಿ ನನ್ನನ್ನು ತೇಜೋವಧೆ ಮಾಡಬೇಕೆಂಬ ಒಂದೇ ಕಾರಣದಿಂದ ಮೇಲ್ಮನೆಯ ಸದಸ್ಯರು ಆ ರೀತಿ ಮಾತನಾಡಿದ್ದಾರೆ. ಅವರು ಮಾತನಾಡುವಾಗ 'ಆ ಸಂಘದ ಅಧ್ಯಕ್ಷರು' ಎಂದು ಹೇಳಿದ್ದರೆ ನಮ್ಮದೇನೂ ಅಭ್ಯಂತರವಿರಲಿಲ್ಲ. 'ಮಾಜಿ ಕಂದಾಯ ಮಂತ್ರಿಗಳಾದ ಸೋಮಶೇಖರ್' ಎಂದು ನನ್ನ ಹೆಸರನ್ನು ಪ್ರಸ್ತಾಪಿಸಿರುವುದಲ್ಲದೆ, ಒಂದೆಡೆ ಲೋಕಾಯುಕ್ತದಲ್ಲಿ ವಿಚಾರಣೆ ನಡೆಯುತ್ತಿರುವಾಗ ಅದೇ ವಿಚಾರಗಳನ್ನು ಮೇಲ್ಮನೆಯಲ್ಲಿ ಪ್ರಸ್ತಾಪಿಸಿ ಸರ್ಕಾರದ ಗಮನಕ್ಕೆ ತರುವ ಮೂಲಕ ನನ್ನನ್ನು ತೇಜೋವಧೆ ಮಾಡಿರುವುದು ಸರಿಯಲ್ಲ. ಈಗಾಗಲೇ ನಾನು ಈ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. 30 ಮಾರ್ಚ್ 1970ರಲ್ಲಿ ನಡೆದ ವಿಚಾರವನ್ನು ಇನ್ನೊಂದು ಸಾರಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

"On 30 March 1970, during the course of a debate in Rajya Sabha a member of that House made certain allegations against a member of Lok Sabha. After some discussion in the House, the Speaker addressed a letter to the Chairman, Rajya Sabha inviting his attention to the matter and observing inter alia, as follows:

> 'You will agree that it is not desirable for members of one House to make allegations or cast reflections on the floor of the House on the members of the other House.'

In his reply the Chairman, Rajya Sabha expressing his agreement with the Speaker, stated that Deputy Chairman, Rajya Sabha had already expressed his disapproval of member's speech." ಇದು ಲೋಕಸಭೆಯಲ್ಲಿ ನಡೆದಿರತಕ್ಕಂಥಹ ಒಂದು ಸಂಪ್ರದಾಯ. ಇವತ್ತು ಈ ರೀತಿ ನನಗೆ ಆಗಿರಬಹುದು. ನಾಳೆ ಇನ್ನೊಬ್ಬರಿಗೆ ಆಗಬಹುದು. ಮಾನ್ಯ ಶಿವಕುಮಾರ್ ಅವರ ಹೆಸರನ್ನು ಅಲ್ಲಿಯ ಮಂತ್ರಿಗಳು ಹೇಳಬಹುದು. ನಾಳೆ ತಾವು ಶಾಸಕರು ಆದಾಗ ಅಥವಾ ಇನ್ನೊಬ್ಬರ ಹೆಸರು ಹೇಳಬಹುದು. ಅದು ಸಾಧ್ಯವಿಲ್ಲ. ಆ ಸಂಸ್ಥೆಯ ಅಧ್ಯಕ್ಷರು ಎಂದು ಹೇಳಿದರೆ ಅದೊಂದು ತರಹ ಇತ್ತು. ವೈಯಕ್ತಿಕವಾಗಿ ಹೆಸರು ಹೇಳಿರುವುದಕ್ಕೆ ಆ ಸದನದಲ್ಲಿ ಅವಕಾಶ ಕೊಡಬಾರದಿತ್ತು. ಕೊಟ್ಟಾಗಿದೆ. ನನ್ನ ಹೆಸರು ಈಗಾಗಲೇ ಪ್ರಚಾರನೂ ಆಗಿದೆ. ಅದಕ್ಕೆ ತಾವು ಸರಿಯಾದಂತಹ ನಿರ್ದೇಶನವನ್ನು ಕೊಡದೇ ಇದ್ದರೆ ಅದು ಇನ್ನೂ ಡ್ಯಾಮೇಜ್ ಆಗುತ್ತದೆ ಮತ್ತು ಇದು ಪುನರಾವರ್ತನೆ ಆಗಬಹುದು. ಆದ್ದರಿಂದ ತಾವು ನಮ್ಮ ರಕ್ಷಣೆಗೆ ಬರಬೇಕು. ನಮ್ಮ ಗೌರವವನ್ನು ಕಾಪಾಡಬೇಕು ಎಂದು ಹೇಳಿ ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ಮೇಲ್ಮನೆ ಸದಸ್ಯರು ಹಾಗೂ ಕೆಳಮನೆ ಸದಸ್ಯರು ಅಣ್ಣ ತಮ್ಮಂದಿರು ಇದ್ದ ಹಾಗೆ. ಅಥವಾ ಇಲ್ಲಿ ಆ ಸದಸ್ಯರ ಬಗ್ಗೆ ನಾವು ಮಾತನಾಡುವುದು ತಪ್ಪು. ಆ ಮನೆಯಲ್ಲಿ

ಇಲ್ಲಿನ ಸದಸ್ಯರ ಬಗ್ಗೆ ಹೆಸರಿಟ್ಟು ಹೇಳುವುದೂ ತಪ್ಪು. ತಾವು ಹೇಳಿದ ಹಾಗೆ ಸಂಘದ ಅಧ್ಯಕ್ಷರು ಎಂದು ಬೇಕಾಗಿದ್ದರೆ ಹೇಳಬಹುದಾಗಿತ್ತು; ಇಲ್ಲಿ ಇದು ನಡೆದಿದೆ. I will go through Kaul and Shakdher. I will definitely write a letter to the Chairman of the Upper House as early as possible; within a week. I am going to write a letter to avoid such occasions in future.

ವಿಷಯ: (ii) ಮೈಸೂರು ಮಹಾನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

+ ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಮೈಸೂರು ಮಹಾನಗರದಲ್ಲಿ ಕಳೆದ ವರ್ಷ ನೀರಿನ ಹಾಹಾಕಾರ ಆಗಿ ಸುಮಾರು 15 ದಿನಗಳ ಕಾಲ ಇಡೀ ರಾಜ್ಯದ ಗಮನವನ್ನು ಸೆಳೆಯುವಂತಹ ಒಂದು ವ್ಯವಸ್ಥೆ ಆಗಿತ್ತು. ಕಾರಣ ಎಂದರೆ ಕಳೆದ ಬಾರಿ ಏಪ್ರಿಲ್ ಕೊನೆ ಮತ್ತು ಮೇ ಮೊದಲನೇ ವಾರದಲ್ಲಿ ನೀರು ಕೆ.ಆರ್.ಎಸ್.ನಲ್ಲಿ 72 ಅಡಿಗಳಿಗೆ ಬಂದು ಅಲ್ಲಿ ದೇವಸ್ಥಾನ ಕೂಡ ಕಾಣುವಂತಹ ಪರಿಸ್ಥಿತಿ ನಿರ್ಮಾಣ ಆಗಿತ್ತು. ಈ ವರ್ಷ ಕೂಡ ಕಳೆದ ವರ್ಷಕ್ಕೆ ಹೋಲಿಕೆಯನ್ನು ಮಾಡಿಕೊಂಡರೆ, ಕಳೆದ ವರ್ಷ ಮಾರ್ಚ್ 31ನೇ ತಾರೀಖು 92 ಅಡಿ ಇತ್ತು. ಈಗ ಇನ್ನೂ ಕೆಳಗೆ ಹೋಗುವಂತಹ ಸ್ಥಿತಿ ನಿರ್ಮಾಣ ಆಗಿದೆ. ಹೀಗಿರುವಂತಹ ಸಂದರ್ಭದಲ್ಲಿ ಕಳೆದ ಬಾರಿ ಇದಕ್ಕೆ ಸಂಬಂಧಪಟ್ಟಹಾಗೆ ಮೈಸೂರು ಮಹಾನಗರದಲ್ಲಿ ಸುಮಾರು 35 ಎಂಜಿಡಿ ನೀರಿನ ಅವಶ್ಯಕತೆ ಇದೆ. ಅಲ್ಲಿ ವಿಶೇಷವಾಗಿ ಕೆ.ಆರ್.ಎಸ್‌ನಿಂದ ಬರುವಂತಹ ನಾಲೆಯಿಂದ 20 ಎಂಜಿಡಿ ನೀರನ್ನು ಡ್ರಾ ಮಾಡುವಂತಹ ವ್ಯವಸ್ಥೆಗಳನ್ನು ಬಹಳ ವರ್ಷಗಳ ಕಾಲದಿಂದ ವಿಶ್ವೇಶ್ವರಯ್ಯನವರ ಕಾಲದಿಂದಲೂ ಕೂಡ ಬಂದಿರತಕ್ಕದ್ದು. ಎರಡು ಯೂನಿಟ್‌ಗಳಲ್ಲಿ 12 ಮತ್ತು 8 ಎಂಜಿಡಿ ನೀರನ್ನು ಡ್ರಾ ಮಾ[illegible]ವಂತಹ ವ್ಯವಸ್ಥೆಗಳಿವೆ. ಕಳೆದ ಬಾರಿ ಈ ರೀತಿ ಗಲಾಟೆ ಆದಂತಹ ಸಂದರ್ಭದಲ್ಲಿ ಇಡೀ [illegible] ಮೈಸೂರು ನಗರದಲ್ಲಿ ತಲ್ಲಣ ಆದಾಗ ಜಿಲ್ಲಾ ಮಂತ್ರಿಗಳು ನಗರಾಭಿವೃದ್ಧಿ ಸಚಿವರು, ನೀರಾವರಿ ಮಂತ್ರಿಗಳೂ ಸಹ ಮೂರೂ ಜನ ಎರಡು ದಿನಗಳ ಕಾಲ ಮೈಸೂರು ನಗರದಲ್ಲಿಯೇ ಇದ್ದು ತಕ್ಷಣದಲ್ಲಿಯೇ ಒಂದು ವಾರ್‌ಫೂಟಿಂಗ್‌ನಲ್ಲಿ ಕೆಲಸವಾಗುವ ರೀತಿಯಲ್ಲಿ ಮಾಡಿ ಒಂದು ಹೊಸ ವ್ಯವಸ್ಥೆ ಆಗಿತ್ತು. ನದಿಯಿಂದ ನೇರವಾಗಿ ಐದು ಎಂಜಿಡಿ ನೀರನ್ನು ಡ್ರಾ ಮಾಡಲಿಕ್ಕೆ ಒಂದು ಎಮರ್ಜೆನ್ಸಿ ಪ್ರಾವಿಜನ್ ಅನ್ನು ಮಾಡಿದರು. ಹಾಗೆ ಪ್ರಾವಿಜನ್ ಮಾಡುವಂತಹ ಸಂದರ್ಭದಲ್ಲಿ ಒಂದು ವಿಚಾರವನ್ನು ಚರ್ಚೆ ಆದಂತಹ ಸಂದರ್ಭದಲ್ಲೂ ಹೇಳಿದ್ದರು. ಈ ವರ್ಷದಲ್ಲಿ ಬಂದಿರುವಂತಹ ಸ್ಕೇರ್ಸಿಟಿಯನ್ನು ನೋಡಿಕೊಂಡು ಮುಂದಿನ ವರ್ಷಕ್ಕೆ ಈ ರೀತಿ ಸಮಸ್ಯೆ ಆದ ರೀತಿಯಲ್ಲಿ ಡಿಸೆಂಬರ್ ಒಳಗೆ ಪರ್ಮನೆಂಟ್ ಸಲ್ಯೂಷನ್ ಮಾಡುವಂತಹ ವ್ಯವಸ್ಥೆಗಳನ್ನು ನಾವು ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದರು. ಜೊತೆಗೆ ಎಡಿಬಿ ಸ್ಕೀಮ್‌ನಲ್ಲಿ ಈಗಾಗಲೇ ಏನು ಮೇಲಾಪುರ ಯೋಜನೆಯಿಂದ ನೀರು ತರಬೇಕಾಗಿದೆ, ಅದನ್ನು ಡಿಸೆಂಬರ್ ಒಳಗೆ ಮುಗಿಸಿಕೊಡುತ್ತೇವೆಂದು ಹೇಳಿದರು. ಇವತ್ತಿನವರೆಗೂ ಕೆಲಸ ಪೂರ್ಣ ಆಗಿಲ್ಲ. ನಾನು ಆಗಲೇ ತಮಗೆ ಹೇಳಿದ ಹಾಗೆ ಇವತ್ತೂ ಸಹ 92 ಅಡಿಗೆ ನೀರು ಬಂದು ಬಿಟ್ಟಿದೆ. ಜೊತೆಗೆ ಮಂಡ್ಯ ಜಿಲ್ಲೆಯಲ್ಲಿರುವಂತಹ ರೈತರಿಗೆ ನೀರನ್ನು ಕೊಡುವಂತಹ ಅವಶ್ಯಕವಾದಂತಹ ಕರ್ತವ್ಯ ರಾಜ್ಯ ಸರ್ಕಾರದ್ದು ಇದೆ. ಅವರಿಗೂ ನೀರು ಕೊಡಬೇಕು. ಆದರೆ ನಾಳೆಯ ದಿವಸ ಮಂಡ್ಯ ಜಿಲ್ಲೆ ಮತ್ತು ಮೈಸೂರು